ವಿಶ್ವವಾಣಿ

ಸಂಪಾದಕೀಯ

ನಿಂತ ಕಾಲಮೇಲೆ ಮೀಸಲು ಕೋರುವುದು ಸರಿಯಲ್ಲ

ರಾಜ್ಯದಲ್ಲಿ ಪಂಚಮಸಾಲಿ ಮಾತ್ರವಲ್ಲದೇ ಈಗಾಗಲೇ ಹಲವು ಸಮುದಾಯಗಳು ತಮಗೆ ಮೀಸಲು ನೀಡುವಂತೆ ಆಗ್ರಹಿಸಿವೆ. ಇದಕ್ಕಾಗಿ ಹಲವು ರ‍್ಯಾಲಿ, ಪ್ರತಿಭಟನೆ, ಧರಣಿಗಳನ್ನು ಮುಗಿಸಿವೆ. ಈ ಎಲ್ಲ ಸಮುದಾಯಗಳಿಗೂ ಮೀಸಲಿನ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವ ಭರವಸೆಯನ್ನು ಸರಕಾರ ನೀಡಿದೆ.

ಆದರೆ ಪಂಚಮಸಾಲಿ ಹೋರಾಟದ ವಿಷಯದಲ್ಲಿ ಹೋರಾಟದ ಹಾದಿ, ಮೊಂಡುತನಕ್ಕೆ ತಿರುಗಿತೇ ಎನ್ನುವ ಪ್ರಶ್ನೆ ಶುರುವಾಗಿದೆ. ಇತರ ಸಮುದಾಯಗಳಿಗೆ ಕೇವಲ ಭರವಸೆ ನೀಡಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ಪಂಚಮಸಾಲಿಗೆ ಮೀಸಲು ನೀಡುವ ಕುರಿತು ಕುಲಶಾಸ್ತ್ರ ಅಧ್ಯಯನಕ್ಕೆ ಈಗಾಗಲೇ ಆದೇಶ ಹೊರಡಿಸಿದ್ದಾರೆ. ಆದ್ದರಿಂದ ಈ ಅಧ್ಯಯನದ ಬಳಿಕ ಮೀಸಲಾತಿ ನೀಡಬೇಕೇ ಬೇಡವೇ ಎನ್ನುವುದು ತಿಳಿಯುತ್ತದೆ. ಆದರೆ ಈಗಲೇ, ಮೀಸಲು ಘೋಷಣೆ ಮಾಡಬೇಕು ಎಂದು ಪಟ್ಟು ಹಿಡಿದು, ಸತ್ಯಾಗ್ರಹ ಆರಂಭಿಸಿರುವುದು ಸರಿಯಾದ ನಡವಳಿಕೆಯೇ ಎನ್ನುವ ಪ್ರಶ್ನೆಗಳು ಶುರುವಾಗಿದೆ.

ಯಾವುದೇ ಸರಕಾರ ಒಂದು ತೀರ್ಮಾನ ತಗೆದುಕೊಳ್ಳುವ ಮೊದಲು ನೂರಾರು ಆಯಾಮದಲ್ಲಿ ಯೋಚಿಸಬೇಕಾಗುತ್ತದೆ. ಈಗ ಮೀಸಲಾತಿ ನೀಡುವಾಗಲೂ, ಹಿಂದುಳಿದ ವರ್ಗಗಳ ಆಯೋಗ ನೀಡುವ ವರದಿಯನ್ನು ನೋಡಬೇಕು. ಈ ವರದಿಯನ್ನು ಸಿದ್ಧಪಡಿಸಲು ಸಮಿತಿ, ರಾಜ್ಯದ ಎಲ್ಲ ಜಿಲ್ಲೆಗಳ ಪ್ರವಾಸ ನಡೆಸಿ, ಅಲ್ಲಿರುವ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಬಳಿಕ ವರದಿಯನ್ನು ಸಲ್ಲಿಸಬೇಕು. ಈ ಎಲ್ಲ ಪ್ರಕ್ರಿಯೆಗೆ ಕನಿಷ್ಠ ಎಂದರೂ ಮೂರು ನಾಲ್ಕು ತಿಂಗಳು ಅಗತ್ಯ ಎನ್ನುವ ಮಾತುಗಳನ್ನು ತಜ್ಞರೇ ಹೇಳಿದ್ದಾರೆ. ಹೀಗಿರುವಾಗ, ಸಮಾವೇಶ ಸಮಾರಂಭ ಮುಗಿಯುವ ಮೊದಲೇ, ಮೀಸಲು ಘೋಷಿಸಿ ಎಂದರೆ ಸರಕಾರಕ್ಕೆ ಏನು ಮಾಡಲೂ ಆಗದ ಸ್ಥಿತಿ ನಿರ್ಮಾಣವಾಗುತ್ತದೆ. ಇದರೊಂದಿಗೆ ಈ ರೀತಿ ಮೊಂಡುತನ ಹಿಡಿದು ಕುಳಿತರೆ, ಸರಿದಾರಿಯಲ್ಲಿರುವ ಹೋರಾಟ, ತಪ್ಪು ಹಾದಿಯತ್ತ ಹೊರಳಿದರೂ ಅಚ್ಚರಿಯಿಲ್ಲ. ಆದ್ದರಿಂದ ಮುಖಂಡರು ಈ ಬಗ್ಗೆ ಯೋಚಿಸಬೇಕಿದೆ. ಸರಕಾರ ಕೂಡ ವಿಳಂಬ ಧೋರಣೆ ಅನುಸರಿಸದೆ, ಇದಕ್ಕೆಂದು ಸೂಕ್ತ ಪರಿಹಾರವನ್ನು ಬೇಗ ಕಂಡುಹಿಡಿಯಬೇಕು.

ಸೊಂಪಾದಕೀಯ

ಐ ಆ್ಯಮ್ ಸಾರಿ ಎಂದ ಹ್ಯಾರಿ

ನಮ್ಮಲ್ಲಿ ರಾಜ ಮಹಾರಾಜರ ಬಳಿ ಇದ್ದ ಸಂಸ್ಥಾನಗಳನ್ನು ಸ್ವಾತಂತ್ರ್ಯದ ಬಳಿಕ ವಾಪಸ್ ಪಡೆಯಲಾಯಿತು. ಸರ್ದಾರ್ ವಲ್ಲಭ ಭಾಯಿ ಪಟೇಲರು ಇದರಲ್ಲಿ ಪ್ರಮುಖ ಪಾತ್ರ ವಹಿಸಿದರು. ಈಗಲೂ ರಾಜ ಮನೆತದವರು ಇರುವರಾದರೂ ಯಾವುದೇ ಅಧಿಕಾರ ಇಲ್ಲ. ಜನರ ಗೌರವ ಇದೆ ಅಷ್ಟೆ. ಬ್ರಿಟನ್ನಿನಲ್ಲೂ ಈಗ ಪ್ರಜಾಪ್ರಭುತ್ವ. ಆದರೆ ರಾಜಮನೆ ತನಕ್ಕೆ ಇನ್ನೂ ಅದರದೇ ಆದ ರಾಜಮರ್ಯಾದೆ, ಒಂದಷ್ಟು ಅಧಿಕಾರ ಇದೆ. ಗೌರವಾದರ ಇದೆ. ಹೀಗಿರುವಾಗಲೇ ಅಲ್ಲಿನ ರಾಜಪರಿವಾರದ ಜೋಡಿಯೊಂದು ಇದೆಲ್ಲವನ್ನೂ ತೊರೆದು ಹೊಗಿದೆ. ಡ್ಯೂಕ್‌ನ ರಾಜಕುಮಾರ ಹ್ಯಾರಿ ಹಾಗೂ ರಾಜಕುಮಾರಿ ಮೇಘನ್ ಅವರೇ ಈ ಜೋಡಿ. ಅವರಿಗೆ ರಾಜ ಮನೆತನ, ಅದರಲ್ಲಿನ ಕಟ್ಟುಪಾಡು ಎಲ್ಲವೂ ಸಾಕಾಗಿತ್ತು ಎಂದು ತೋರುತ್ತದೆ. ಆದ್ದರಿಂದಲೇ 'ಹಾರುತ ದೂರಾ ದೂರಾ ಮೇಲೇರುವ ಬಾರಾ ಬಾರಾ...' ಎಂದು ದೂರದ ಅಮೆರಿಕಕ್ಕೆ ಹಾರಿದ್ದಾರೆ. ಹ್ಯಾರಿ ಅಂತ ಹೆಸರಿಟ್ಟದ್ದೇ ತಪ್ಪಾಯಿತೇನೋ. ಪತ್ನಿಯ ಹೆಸರೂ ಮೇಘನ್ ಅಂತೆ. ಯಾರಿಂದ, ಎಲ್ಲಿಂದ ಈ ರೀತಿಯ ಮೇಘಸಂದೇಶ ಬಂದಿತ್ತೋ ಏನೊ. 'ಹೋಗದಿರಿ ಸೋದರರೆ.. ಮನೆಯನು ತೊರೆದು , ಋಣಾನುಬಂಧವ ಕಡಿದು ಹೋಗದಿರಿ' ಎಂದು ಎಲಿಜಬೆತ್ ರಾಣಿ ಕೂಡ ಪರಿಪರಿಯಾಗಿ ಹೇಳಿದರೂ ಕೇಳಲಿಲ್ಲವಂತೆ. ಆದರೂ 'ನಿಮ್ಮ ನಿರ್ಧಾರ ಬದಲಾದರೆ ವಾಪಸ್ ಬನ್ನಿ, ಒಂದು ವರ್ಷ ಕಾಯುತ್ತೇವೆ' ಎಂಬ ಆಫರ್ ಇತ್ತು. ಡ್ಯೂಕ್ ದಂಪತಿ ಯಾರದಾದರೂ ಮಾತಿಗೆ ಮರುಳಾಗಿ ಡ್ರ್ಯಾಪ್ ಆಗಿದ್ದಾರಾ ಎಂಬ ಕಾಳಜಿ ಇದ್ದೀತು. ಆದರೆ ಯಾವುದಕ್ಕೂ ಅವರು ಜಪ್ಪಯ್ಯ ಅಂದಿಲ್ಲ. ಇದೀಗ ರಾಜಮನೆತನವು ಅವರಿಗೆ ಅಧಿಕೃತವಾಗಿ ಬಿಡುಗಡೆ ನೀಡಿದೆ. ಹೀಗೆ ಕಾಣದ ಕಡಲಿಗೆ ಅವರ ಮನ ಯಾಕೆ ಹಂಬಲಿಸಿತೋ ಏನೊ. ಬಹುಶಃ ಉತ್ತರಾಧಿಕಾರದ ಪ್ರಶ್ನೆಯಲ್ಲಿ ಇದಕ್ಕೆ ಉತ್ತರ ಕಂಡು ಕೊಂಡಿರಬೇಕು.ಈಗಿನ ಲೆಕ್ಕದಲ್ಲಿ ಹ್ಯಾರಿ ಮತ್ತು ಮೇಘನ್‌ಗೆ ಅಧಿಕಾರ ಸಿಗುವ ಅವಕಾಶ ಉತ್ತರ ಧ್ರುವದಷ್ಟೇ ದೂರವಂತೆ. ಏಕೆಂದರೆ ಸದ್ಯ ಅಧಿಕಾರವಿನ್ನೂ ರಾಣಿ ಕೈಯಲ್ಲಿದೆ. ಅವರ ನಂತರ ಹ್ಯಾರಿ ಸರದಿ. ಇಬ್ಬರೂ ಸೆಂಚುರಿ ಅಂಚಿನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದಾರೆ. ಅನಂತರ ಪ್ರಿನ್ಸ್ ಚಾರ್ಲ್ಸ್ ಮತ್ತು ಕೆಮಿಲಿಯ ಅವರದು. ಬಳಿಕ ವಿಲಿಯಂ ಮತ್ತು ಕೇಟ್ ಮಿಡ್ಲ್‌ಟನ್ ಅವರದು.ಆ ಬಳಿಕ ಇವರ ಟರ್ನ್. ಇದರ ನಡುವೆ ವಿಲಿಯಂ ಮಕ್ಕಳ ಅಧಿಕಾರವೂ ಇದೆಯಂತೆ. ಕ್ಯೂ ತುಂಬ ಉದ್ದವಿದೆ. ಆದ್ದರಿಂದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡೋದೇ ಬೇಡ ಎಂದು ಭಾವಿಸಿರಬೇಕು. ಐ ಆ್ಯಮ್ ಸಾರಿ ಎಂದ ಹ್ಯಾರಿಗೆ ಹೋಗಿಬರ್ರಿ ಎಂದು ರಾಣಿ ಕಳಿಸಿಕೊಟ್ಟಿದ್ದಾರೆ.

ಸಂಪಾದಕರ ಸದ್ಯಶೋಧನೆ

ಕತ್ತೆ, ಭೂತ ಮತ್ತು ನ್ಯೂಸ್ ಚಾನೆಲ್

ಕೆಲ ದಿನಗಳ ಹಿಂದೆ, ವಾಟ್ಸಾಪ್‌ನಲ್ಲಿ ಒಂದು ಕಥೆಯನ್ನು ಸ್ನೇಹಿತರೊಬ್ಬರು ಕಳಿಸಿದ್ದರು. ಆ ಕಥೆಯನ್ನು ಯಾಕೆ ಪ್ರಸ್ತಾಪಿಸಿದೆ ಎಂಬುದನ್ನು ನಂತರ ಹೇಳುತ್ತೇನೆ. ಈಗ ಆ ಕಥೆಯನ್ನು ಓದೋಣ. ಒಂದು ಮರಕ್ಕೆ ಯಾರೋ ಕತ್ತೆಯನ್ನು ಕಟ್ಟಿ ಹಾಕಿದ್ದರು. ರಾತ್ರಿ ವೇಳೆ ಭೂತವೊಂದು ಕತ್ತೆಯನ್ನು ಕಟ್ಟಿ ಹಾಕಿದ ಹಗ್ಗವನ್ನು ಕತ್ತರಿಸಿ ಹಾಕಿತು. ಕತ್ತೆ ಮನಬಂದಂತೆ ಓಡಾಡಲಾರಂಭಿಸಿತು. ಅದು ಸನಿಹದಲ್ಲಿರುವ ರೈತನ ಗದ್ದೆಗೆ ನುಗ್ಗಿ ಬೆಳೆಯನ್ನೆಲ್ಲಾ ಧ್ವಂಸ ಮಾಡಿತು. ಇದರಿಂದ ಕುಪಿತಳಾದ ರೈತನ ಹೆಂಡತಿ, ಆ ಕತ್ತೆಗೆ ಗುಂಡು ಹೊಡೆದು ಸಾಯಿಸಿದಳು. ಈ ಸುದ್ದಿ ಕತ್ತೆಯ ಮಾಲೀಕನಿಗೆ ಗೊತ್ತಾಯಿತು. ಇದರಿಂದ ಆಕ್ರೋಶಗೊಂಡ ಆತ, ರೈತನ ಹೆಂಡತಿಯನ್ನು ಗುಂಡು ಹೊಡೆದು ಸಾಯಿಸಿ ಪ್ರತೀಕಾರ ತೀರಿಸಿಕೊಂಡ. ತನ್ನ ಹೆಂಡತಿಯನ್ನು ಕಣ್ಣಾರೆ ಸಾಯಿಸಿದ್ದನ್ನು ನೋಡಿ ಕ್ರುದ್ಧನಾದ ರೈತ, ಹಾರೆ, ಪಿಕಾಸಿಯಿಂದ ಹೊಡೆದು ಕತ್ತೆಯ ಮಾಲೀಕನನ್ನು ಸಾಯಿಸಿದ. ಈ ಸಮಾಚಾರ ಕತ್ತೆಯ ಮಾಲೀಕನ ಪತ್ನಿ ಮತ್ತು ಮಗನಿಗೆ ಗೊತ್ತಾಯಿತು. ಇದರಿಂದ ಅವರ ಪಿತ್ತ ನೆತ್ತಿಗೇರಿತು. ಹಿಂದೆ ಮುಂದೆ ನೋಡದೇ ಅವರು ರೈತನ ಮನೆಗೆ ಬೆಂಕಿ ಇಟ್ಟು ಸುಟ್ಟು ಹಾಕಿದರು. ತನ್ನ ಕಣ್ಣೆದುರೇ ತನ್ನ ಮನೆ ಭಸ್ಮವಾಗುವುದನ್ನು ನೋಡಿದ ರೈತನಿಗೆ ತಡೆದುಕೊಳ್ಳಲು ಆಗಲಿಲ್ಲ. ಆತ ತನ್ನ ಮನೆಯಿಂದ ಮಚ್ಚು ಹಿಡಿದು ಬಂದವನೇ ಕತ್ತೆಯ ಮಾಲೀಕನ ಹೆಂಡತಿ ಮತ್ತು ಮಗನ ಮೇಲೆ ಬೀಸಿದ. ಆತ ಮಚ್ಚು ಬೀಸಿದ ಹೊಡೆತಕ್ಕೆ ಅವರಿಬ್ಬರ ರುಂಡಗಳು ಹಾರಿದವು. ಒಂದೆರಡು ದಿನಗಳಲ್ಲಿ ಆ ಊರಿನಲ್ಲಿ ಆಗಬಾರದ ದುರಂತಗಳು ಸಂಭವಿಸಿದವು. ಇವನ್ನೆಲ್ಲಾ ಕಂಡು ರೈತನಿಗೆ ಬಹಳ ಪಶ್ಚಾತ್ತಾಪವಾಯಿತು. ಯಾಕೆ ಹೀಗಾಯಿತು, ಇದಕ್ಕೆಲ್ಲಾ ಕಾರಣಗಳೇನು ಎಂದು ಆತ ಯೋಚಿಸಲಾರಂಭಿಸಿದ. ಆತ ಆ ದಿನ ರಾತ್ರಿಯಾಗುವುದನ್ನೇ ಕಾಯುತ್ತಿದ್ದ. ರಾತ್ರಿ ಕವಿಯಿತು. ಭೂತ ಪ್ರತ್ಯಕ್ಷವಾಯಿತು. ಆಗ ರೈತ, ನೀನ್ಯಾಕೆ ಅವರನ್ನೆಲ್ಲಾ ಸಾಯಿಸಿದೆ?' ಎಂದು ಕೇಳಿದ. ಅವನ ಮಾತುಗಳನ್ನು ಕೇಳಿ ಭೂತಕ್ಕೆ ಆಶ್ಚರ್ಯವಾಯಿತು. ನಾನು ಯಾರನ್ನೂ ಸಾಯಿಸಿಲ್ಲ. ಮರಕ್ಕೆ ಹಗ್ಗದಿಂದ ಕತ್ತೆಯನ್ನು ಕಟ್ಟುಹಾಕಿದ್ದರಲ್ಲ, ನಾನು ಆ ಹಗ್ಗವನ್ನು ಕತ್ತರಿಸಿದೆ. ಇದರಲ್ಲಿ ನನ್ನ ಅಪರಾಧವೇನಿದೆ? ನನಗೆ ಆ ಕತ್ತೆ ನರಳುವುದನ್ನು ನೋಡಲಾಗಲಿಲ್ಲ. ಹೀಗಾಗಿ ನಾನು ಹಗ್ಗ ಕತ್ತರಿಸಿ ಅದನ್ನು ಬಿಡುಗಡೆ ಮಾಡಿದೆ, ಅಷ್ಟೇ. ಆದರೆ ನೀವು, ನಿಮ್ಮ ನಿಮ್ಮೊಳಗಿರುವ ದೆವ್ವ -ಭೂತಗಳನ್ನು ಬಿಡುಗಡೆ ಮಾಡಿಕೊಂಡಿರಿ. ಅದರ ಫಲವಾಗಿ, ನೋಡನೋಡುತ್ತಿದ್ದಂತೆ ಸಾವು- ನೋವುಗಳು ಸಂಭವಿಸಿದವು. ಹೇಳು, ಇದರಲ್ಲಿ ನನ್ನ ತಪ್ಪೇನಿದೆ? ನಿಮ್ಮ ತಪ್ಪಿಗೆ ನನ್ನನ್ನು ಹೊಣೆಗಾರರನ್ನಾಗಿ ಮಾಡಬೇಡಿ' ಎಂದು ಭೂತ ಹೇಳಿತು. ಭೂತದ ಮಾತುಗಳನ್ನು ಕೇಳಿ ರೈತ ನಿರುತ್ತರನಾದ. ಇಲ್ಲಿಗೆ ಕಥೆ ಮುಗಿಯಿತು. ಈ ಕಥೆಯನ್ನು ಪ್ರಸ್ತುತ ಸಂದರ್ಭಕ್ಕೆ ತಾಳೆ ಹಾಕಿ ನೋಡಿ. ಟಿವಿ ನ್ಯೂಸ್ ಚಾನೆಲ್ಲುಗಳು ವರ್ತಿಸುವ ರೀತಿಗೂ, ಆ ಭೂತ ವರ್ತಿಸಿದ ರೀತಿಗೂ ಏನಾದರೂ ವ್ಯತ್ಯಾಸವಿದೆಯಾ? ಹ್ಞ್... ಇಲ್ಲ, ನ್ಯೂಸ್ ಚಾನೆಲ್ಲುಗಳು ಕ್ಷಣ ಕ್ಷಣಕ್ಕೂ ಮರಕ್ಕೆ ಕಟ್ಟಿ ಹಾಕಿದ ಕತ್ತೆಯ ಹಗ್ಗವನ್ನು ಕತ್ತರಿಸುವ ಕೆಲಸವನ್ನು ಮಾಡುತ್ತಲೇ ಇರುತ್ತವೆ. ಅದನ್ನು ನೋಡಿ ಜನ ತಮ್ಮ ತಮ್ಮಲ್ಲಿ ವಾದ ಮಾಡುತ್ತಾರೆ, ಜಗಳವಾಡುತ್ತಾರೆ, ಆಸ್ತಿ-ಪಾಸ್ತಿಗೆ ನಷ್ಟವನ್ನುಂಟು ಮಾಡುತ್ತಾರೆ. ಕೊನೆಗೆ ಬಡಿದಾಡಿಕೊಂಡು ಸಾಯುತ್ತಾರೆ. ಆದರೆ, ಈ ಕಥೆಯಲ್ಲಿನ ಭೂತದಂತೆ, ಚಾನೆಲ್ಲುಗಳು ತಮ್ಮದೇನೂ ತಪ್ಪಿಲ್ಲ ಎಂಬಂತೆ ನಿರುಮ್ಮಳವಾಗಿ ಇದ್ದು ಬಿಡುತ್ತವೆ. ಆದ್ದರಿಂದ ಪ್ರತಿ ಸಲ ಚಾನೆಲ್ಲುಗಳು, ಕತ್ತೆಗೆ ಕಟ್ಟಿದ ಹಗ್ಗವನ್ನು ಕತ್ತರಿಸಿದಾಗ, ಪ್ರತಿಕ್ರಿಯಿಸಬಾರದು. ನೋಡಿಕೊಂಡು ಸುಮ್ಮನಿರಬೇಕು.

ಬ್ರಾಹ್ಮಣರಿಗೆ ರೌರವ ನರಕ ತಪ್ಪಿದ್ದಲ್ಲ

ರಾವ್ – ಭಾಜಿ

ಪಿ.ಎಂ.ವಿಜಯೇಂದ್ರ ರಾವ್

journocate@gmail.com

ಆಕೆಯ ಏಕೈಕ ಅಪರಾಧ ಆಕೆ ಆತನಾಗಿಲ್ಲದ್ದು. ಇದು ಇಂದಿನ ಕಠೋರ ವಾಸ್ತವ. ತುಸುವಾದರೂ ಈ ವಾಸ್ತವದ ಘೋರತೆಯ ಅರಿವಾಗಬೇಕಾದರೆ ನೀವು ಆತನಾಗಿರದೆ, ಆಕೆಯಾಗಿರಬೇಕು. ಎಲ್ಲ ಹೆಣ್ಣುಗಳು ಅತ್ಯಾಚಾರಕ್ಕೊಳಗಾಗುವುದಿಲ್ಲ. ಆದರೆ ಅತ್ಯಾಚಾರಕ್ಕೊಳಗಾಗದ ಹೆಣ್ಣುಗಳೆಲ್ಲರ ಬಾಳು ನೆಮ್ಮದಿಯದಲ್ಲ. ಅವರು ಅನುಭವಿಸುವ ನಿತ್ಯ ಕಿರುಕುಳದ ಮೂಲ ಒಂದೇ – ವ್ಯಕ್ತಿ ಹೆಣ್ಣೆಂಬುದು.

ಬಹುತೇಕ ಹೆಂಗಸರು ಅವರವರ ಕಾರ್ಯಕ್ಷೇತ್ರದಲ್ಲಿ ಅನುಭವಿಸುವ ಹಿಂಸೆಯಿದು. ಸಂಪರ್ಕರಹಿತ ಲೈಂಗಿಕ ಕಿರುಕುಳ ಪ್ರಕರಣಗಳೂ ತಿಳಿದದ್ದೇ. ಆಕೆಯ ಉಡುಪನ್ನಷ್ಟೆ ಸ್ಪರ್ಶಿಸಿದರೆ ಅದನ್ನು ಅತ್ಯಾಚಾರವೆಂದು ಪರಿಗಣಿಸಲಾಗುವುದಿಲ್ಲವೆಂಬ ನ್ಯಾಯಾಲಯವೊಂದರ ಇತ್ತೀಚಿನ ಅಪದ್ಧ ತೀರ್ಪು ಆಕೆಗೆ ಕಿರುಕುಳವನ್ನು ಮುಂದುವರಿಸಲು ಕೊಟ್ಟ ಪರವಾನಗಿಯಂತಿದೆ. ಇಂಥದೇ ಕಿರುಕುಳವನ್ನು ಅವರಷ್ಟೇ ನಿರಂತರವಾಗಿ ಅನುಭವಿಸುವ ವರ್ಗ, ದಲಿತರನ್ನು ಹೊರತುಪಡಿಸಿದರೆ, ಬ್ರಾಹ್ಮಣರದ್ದು.

ದಲಿತರಿಗಾದರೋ ಕಾನೂನಿನ ರಕ್ಷಣೆಯಿದೆ. (ಆ ಕಾನೂನಿನ ದುರ್ಬಳಕೆಯೂ ಉಂಟು, ಆ ವಿಷಯ ಬೇರೆ). ಕಿರುಕುಳಕ್ಕೆ ಒಳಗಾದವರು ಮಹಿಳೆಯರೇ ಇರಲಿ, ದಲಿತರೇ ಇರಲಿ, ಕಾನೂನು ಅದನ್ನು ತಡೆಗಟ್ಟಲು ಸಾಧ್ಯವಾಗಿಲ್ಲ. ಅಲ್ಪಸಂಖ್ಯಾತ ಬ್ರಾಹ್ಮಣರ ಮೇಲಾಗುವ ದೌರ್ಜನ್ಯ, ಹಿಂಸೆ, ಕಿರುಕುಳ, ಅನ್ಯಾಯವನ್ನು ತಡೆಗಟ್ಟಲು ಯಾವ ವಿಶೇಷ ಕಾನೂನೂ ಇಲ್ಲ. ಇರುವ ಕಾನೂನಿಗೇ ಇಂತಹ ನಿತ್ಯ ಘಟಿಸುವ ಪ್ರಕರಣಗಳ ಪ್ರಮಾಣವನ್ನಾದರೂ ಕಡಿಮೆ ಮಾಡುವ ಶಕ್ತಿ ಇದೆ. ಆದರೆ, ಬ್ರಾಹ್ಮಣರು ಓಟ್ ಬ್ಯಾಂಕ್ ಅಲ್ಲವಲ್ಲ?

ಬ್ರಾಹ್ಮಣರು ಪಾಪ ಮಾಡಿದರೆ, ಅವರು ತಿಳಿದವರಾದ್ದರಿಂದ, ಆ ತಪ್ಪಿಗೆ ಉಳಿದವರ ಪಾಪಕ್ಕೆ ದೊರಕುವುದಕ್ಕಿಂತ ಹೆಚ್ಚು ಉಗ್ರ ಶಿಕ್ಷೆ ಸಿಗುತ್ತದೆ ಎಂದು ಶಾಸ್ತ್ರಗಳು ಹೇಳುತ್ತವೆ. ಆದರೆ ಅವರ ಮೊದಲ ತಪ್ಪೇ ಬ್ರಾಹ್ಮಣರಾಗಿ ಜನಿಸಿದ್ದು ಎಂಬಂತಿರುವ ಇಂದಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣರೆಲ್ಲರಿಗೂ ನರಕ ಕಟ್ಟಿಟ್ಟ ಬುತ್ತಿ. ವಿಶೇಷವೆಂದರೆ, ಆ ಬುತ್ತಿಯನ್ನು ಉಣ್ಣಲು ಪರಲೋಕಕ್ಕೆ ತೆರಳಬೇಕಿಲ್ಲ, ಇಹಲೋಕದಲ್ಲೇ ಅದು ಬಿಚ್ಚಿಕೊಳ್ಳುತ್ತದೆ. ಹುಟ್ಟಿನಿಂದಲೇ ಅಂಟಿಕೊಳ್ಳುವ ಈ ಕಳಂಕದ ಬಾಧೆಯ ತೀವ್ರತೆಯ ಶಮನಕ್ಕಾಗಿ ಕೆಲ ಬ್ರಾಹ್ಮಣರು ಎಡಪಂಥದ ಮೊರೆಹೋಗುತ್ತಾರೆ, ಕೆಲವರು ಹೋದಂತೆ ಸೋಗು ಹಾಕುತ್ತಾರೆ. ಉಗ್ರ, ಎಡಪಂಥೀಯರ ಜತೆ ಗುರುತಿಸಿಕೊಂಡ ಹಿರಿಯ ಪತ್ರಕರ್ತರೊಬ್ಬರು ಬ್ರಾಹ್ಮಣರನ್ನು ಹೀಗಳೆಯಲಿಕ್ಕೆ ಮೀಸಲಿಟ್ಟ ತಮ್ಮ ನಿಯತ ಕಾಲಿಕೆಯ ಒಂದು ಸಂಚಿಕೆಯ ಮುಖಪುಟದಲ್ಲಿ ಅಪಸವ್ಯ-ಧಾರಿ ಬ್ರಾಹ್ಮಣನೊಬ್ಬನ ಚಿತ್ರವನ್ನು ಪ್ರಕಟಿಸಿ ಧನ್ಯರಾದ ಸರಿ ಸುಮಾರಿನಲ್ಲೇ ಪಿತೃವಿಯೋಗದ ನಂತರ ಮಾಡಿಸಿಕೊಳ್ಳಬೇಕಾದ ಕೇಶಮುಂಡನದ ಉಪಯೋಗವನ್ನು ಖಾಸಗಿಯಾಗಿ, ಬಿಯರ್ ಕುಡಿಯುತ್ತಾ ಹಂಚಿಕೊಂಡಿದ್ದರು. ಭೋಜನಪ್ರಿಯನಿಗೆ ಉದರಪೋಷಣೆಯ ಮಹತ್ವವನ್ನು ಹೇಳಿಕೊಡಬೇಕೇ?

ಆ ಪತ್ರಕರ್ತನ ಮಾತು ಬಿಡಿ, ಸ್ವತಃ ನಾನೂ ಅಂದು ಉಗ್ರ ನಾಸ್ತಿಕನೇ. (ಈಗಲೂ ಪರಮ ಆಸ್ತಿಕನೇನಲ್ಲ). ಆದರೆ ಹೊಟ್ಟೆಪಾಡಿನ ನಾಸ್ತಿಕತೆಯಲ್ಲ. ಯಾರನ್ನೂ ಮೆಚ್ಚಿಸಲಿಕ್ಕೆ ಹಾಕಿದ ಮುಖವಾಡವಲ್ಲ. ನನ್ನ ಹದಿನೇಳನೇ ವಯಸ್ಸಿಗೆ ಸ್ವಪ್ರೇರಣೆಯಿಂದ, ಸ್ವಾನುಭವದಿಂದ, ವಿವೇಕಪೂರ್ಣವಾಗಿ ದೇವರನ್ನು ನಿರಾಕರಿಸಿದ್ದೆ. ನನ್ನ ನಾಸ್ತಿಕತೆಯ ಒಣಾಡಂಬರ ನಡೆಸಿಲ್ಲ. ಎಚ್. ನರಸಿಂಹಯ್ಯನವರ ವಿಚಾರಧಾರೆಯೋ, ಪಿ. ಲಂಕೇಶರಿಂದ ಸೋಂಕಿರಬಹುದಾದ ಬಾಲಿಶ ಮತ-ದ್ವೇಷವೋ ಕಾಣೆ, ನಮ್ಮ ಮನೆಗೆ ಪೇಜಾವರ ಮಠಾಧಿಪತಿಗಳು ಬರುವುದಿತ್ತು, ಕೆಲಸ ಸೃಷ್ಟಿಸಿಕೊಂಡು ಮನೆಯಿಂದ ಹೊರಬಿದ್ದಿದ್ದೆ. ಇದು ವೃತ್ತಿಪರ ಪತ್ರಕರ್ತನ ಲಕ್ಷಣವಲ್ಲ ಎಂದು ಮುಂದೆಂದೋ ಮನವರಿಕೆಯಾಯಿತು. ಲಂಕೇಶರಷ್ಟೇ ಪೂರ್ವಗ್ರಹ ನನ್ನಲ್ಲೂ ಹೊಕ್ಕಿತ್ತು. ಅದರಿಂದ ಹೊರಬಂದು ವಿಶ್ವೇಶ ತೀರ್ಥರನ್ನು ಕಾಣುವ ಪ್ರಜ್ಞೆ ಬಂದಿದ್ದು ತಡವಾಗಿ. ಅವರಂತಹ ಸಾತ್ವಿಕ, ಧರ್ಮನಿಷ್ಠ, ಪ್ರಗತಿಪರ ಸಂತನ ಭೇಟಿಯ ಭಾಗ್ಯದಿಂದ ದೂರ ಉಳಿದದ್ದಕ್ಕೆ ಖೇದವಿದೆ. ಅವರ ನಿಧನಕ್ಕೆ ಮುಂಚೆ ಒಮ್ಮೆ ಭೇಟಿಯಾಗಿದ್ದೆನಾದರೂ ಸಾಂಗೋಪಾಂಗವಾಗಿ ಮಾತನಾಡಲಾಗಲಿಲ್ಲ. ಎಡಪಂಥೀಯ ಮಾಧ್ಯಮ ಅಂತಹವರನ್ನೂ ವಿಕೃತವಾಗಿ ಚಿತ್ರಿಸಿತು.

ಮಾಧ್ಯಮದ ಮುಖ್ಯವಾಹಿನಿಯಿಂದ ನಾನು ದೂರ ಉಳಿಯುವುದಕ್ಕೆ ಮುಖ್ಯ ಕಾರಣ ಅಲ್ಲಿನ ಜಾತೀಯತೆ. ಅವಕಾಶಗಳನ್ನರಸಿ ಸಣ್ಣ ಊರಿನಿಂದ ದೊಡ್ಡ ಊರಿಗೆ ವಲಸೆ ಹೋಗುವುದು ಕ್ರಮ. ನಾನು ಬಾಂಬೆ, ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿ, ಗ್ರಾಮೀಣ ಪತ್ರಿಕೋದ್ಯಮವೆಂದರೆ ಮೂಗು ಮುರಿಯುವವರೇ ಹೆಚ್ಚು ಜನರಿರುವ ವ್ಯವಸ್ಥೆಯಲ್ಲಿ ಸಣ್ಣ ಊರಿನಲ್ಲಿ ವರದಿಗಾರನಾಗಿ ಅನುಭವ ಪಡೆಯಲು ಬಯಸಿ ಮೈಸೂರಿಗೆ ಬಂದೆ. ಇಲ್ಲಿ ನಾನು ಗಳಿಸಿದ್ದು ಸಾಕಷ್ಟಿದೆ. ಆದರೆ, ಖಿನ್ನನಾಗಿಸಿದ್ದು ನನ್ನ ಕೆಲವು ಸಹೋದ್ಯೋಗಿಗಳ ಮಾನಸಿಕ ಅಸ್ವಸ್ಥತೆ. ಪತ್ರಿಕಾರಂಗದಲ್ಲಿಯೂ ಜಾತಿ ವಿಷಮತೆ ಇರಬಹುದೆಂಬ ಅರಿವು ಮೂಡಿದ್ದೇ ಅವರಿಂದ.

ತಾಳಿ ಕಟ್ಟುವಾಗ ನನಗೆ ನನ್ನ ಬಾಳಸಂಗಾತಿಯ ಜಾತಿ ತಿಳಿದಿರಲಿಲ್ಲ, ಆಕೆಗೂ ನನ್ನ ಜಾತಿ ತಿಳಿದಿರಲಿಲ್ಲ, ಅದರ ಅವಶ್ಯಕತೆ ಇಬ್ಬರಿಗೂ ಕಂಡುಬಂದಿರಲಿಲ್ಲ. ಮದುವೆಯ ಹೊಸದರಲ್ಲಿ ಮನೆಗೆ ಬಂದ ಜಾತ್ಯತೀತ ಪತ್ರಕರ್ತ ಮಿತ್ರರೊಬ್ಬರು ಯಾವುದೇ ಮುಲಾಜಿಲ್ಲದೆ ನನ್ನಾಕೆಯನ್ನು ಅವಳ ಜಾತಿಯ ಬಗ್ಗೆ ವಿಚಾರಿಸಿ ನಮ್ಮನ್ನು ಅವಾಕ್ಕಾಗಿಸಿದ್ದರು. ಅದರಿಂದ ಚೇತರಿಸಿಕೊಳ್ಳಲು ನನ್ನ ಮಡದಿಗೆ ಸಾಕಷ್ಟು ಸಮಯ ಹಿಡಿಯಿತು.

ಇಂಗ್ಲಿಷ್ ಮೇಲೆ ಪ್ರಭುತ್ವವಿರುವ ಕನ್ನಡ ಮಾಧ್ಯಮದಲ್ಲಿರುವ ಪತ್ರಕರ್ತರ ಸಂಖ್ಯೆ ಕಡಿಮೆ. ಕರ್ನಾಟಕದಲ್ಲಿದ್ದು ಕನ್ನಡ ಕಲಿಯದೇ ಇಂಗ್ಲಿಷ್ ಭಾಷಾ ಮಾಧ್ಯಮದಲ್ಲಿ ಸೇವೆ ಸಲ್ಲಿಸುತ್ತಿರುವ ಕನ್ನಡಿಗ ಪತ್ರಕರ್ತರೂ ಹೆಚ್ಚಿನ ಸಂಖ್ಯೆಯಲ್ಲೇ ಕಂಡುಬರುತ್ತಾರೆ. ಇವೆರಡೂ ನ್ಯೂನತೆಗಳೇ. ಯಾವುದೇ ರಾಜ್ಯದಲ್ಲಿನ ಪತ್ರಕರ್ತರೂ ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ದುಭಾಷಿಗಳಾಗಿದ್ದಲ್ಲಿ ಮಾಧ್ಯಮಲೋಕ ಶ್ರೀಮಂತವಾಗಿ ಓದುಗರ/ಶ್ರೋತೃಗಳ/ವೀಕ್ಷಕರಿಗೂ ಲಾಭವಾಗುತ್ತೆ. ಈ ದುರದೃಷ್ಟವೆಂದರೆ, ಕನ್ನಡ ಕಲಿಯದ ಇಂಗ್ಲಿಷ್ ಭಾಷಾ ಪತ್ರಕರ್ತರು ತಮ್ಮ ಕನ್ನಡ-ಅಜ್ಞಾನವನ್ನು ಹೆಮ್ಮೆಯಿಂದ ತೋರ್ಪಡಿಸುವುದೂ, ಇಂಗ್ಲಿಷ್ ಜ್ಞಾನದ ಅಭಾವದಿಂದ ಕುಂದಿದ ಕನ್ನಡ ಭಾಷಾ ಮಾಧ್ಯಮದಲ್ಲಿನ ಪತ್ರಕರ್ತರು ಕೊರಗುವುದೂ ಸಾಮಾನ್ಯ. ಈ ಕೊರತೆಯನ್ನು ನನ್ನ ಕೈಲಾದ ಮಟ್ಟಿಗೆ ನೀಗಲು ಪ್ರಯತ್ನಿಸಿದ್ದೇನೆ. ಪ್ರಜಾವಾಣಿಯ ನನ್ನ ಒಬ್ಬ ಸಹೋದ್ಯೋಗಿ ಡೆಕ್ಕನ್ ಹೆರಾಲ್ಡ್‌ಗೆ ಅವರು ಬರೆಯುತ್ತಿದ್ದ, ಹೇರಳ ತಪ್ಪುಗಳಿರುತ್ತಿದ್ದ ಅವರ ಲೇಖನಗಳನ್ನು ಸರಿಪಡಿಸಿ ಕೊಟ್ಟಿದ್ದೂ ಉಂಟು. ಅದಕ್ಕೆ ಪ್ರತ್ಯುಪಕಾರವಾಗಿ ಅವರು ನಾನು ಬರೆದು ಪ್ರಕಟಣೆಗಿನ್ನೂ ಕಳಿಸದ ಲೇಖನಗಳನ್ನು ನಾನಿಲ್ಲದ ಸಮಯದಲ್ಲಿ ಅಳಿಸಿಹಾಕಿದ್ದರು. (ಆಗಷ್ಟೇ ಕಂಪ್ಯೂಟರ್ ಬಳಕೆ ಕಲಿತಿದ್ದ ನಮಗೆ ಪಾಸ್‌ವರ್ಡ್ ರಕ್ಷಣೆಯ ಬಗ್ಗೆ ಅರಿವಿರಲಿಲ್ಲ).

ಇವರಾಗಲೀ, ಇವರ ಪರಿವಾರದವರಾಗಲೀ ಎದುರಿಗೆ ನಗುನಗುತ್ತಲೇ ಮಾತನಾಡಿಸುತ್ತಿದ್ದರು. ತೋರ್ಪಡಿಕೆಯ ಸಾಮರಸ್ಯ ಅವರಿಗೆ ಅವಶ್ಯವಾಗಿತ್ತು. ಏಕೆಂದರೆ ನಾನು ಓಡಾಡಿ ತರುತ್ತಿದ್ದ ಬಹುತೇಕ ಸುದ್ದಿಗಳನ್ನು ಕೂತಲ್ಲೇ ಪಡೆಯುವ ಸವಲತ್ತು ಅವರಿಗಿತ್ತು. ಅದಕ್ಕೆ ನನ್ನ ಅಪಾತ್ರದಾನದ ಔದಾರ್ಯವಿತ್ತು. ನಗುನಗುತ್ತಲೇ ಮಾತನಾಡಿಸುತ್ತಿದ್ದರೆಂದು ಹೇಳಿದೆ, ಆದರೆ ನನ್ನ ಬೆನ್ನ ಹಿಂದೆಯೂ ನಗುತ್ತಾರೆಂಬುದು ಆ ನಗುವಿನಿಂದಲೇ ತಿಳಿಯುತ್ತಿತ್ತು. ಬೆನ್ನ ಹಿಂದಿನ ಆ ನಗು ಬೆನ್ನಿಗೆ ಇರಿತವಾಗಿ ಮಾರ್ಪಾಡಾಗಲು ಒಂದು ಮುಹೂರ್ತವನ್ನು ಕಾಯುತ್ತಿತ್ತು. ಅಂದಿನ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್ ತಿಲಕ್ ಕುಮಾರ್ ಅವರು ಮೈಸೂರಲ್ಲಿ ನೀಡಿದ ಔತಣ ಕೂಟ ಆ ಮುಹೂರ್ತವನ್ನು ಒದಗಿಸಿತ್ತು. ವಿವಿಧ ರಾಜ್ಯಗಳ ರಾಜಧಾನಿಗಳಲ್ಲಿನ ಡೆಕ್ಕನ್ ಹೆರಾಲ್ಡ್ ಪ್ರತಿನಿಧಿಗಳಿಗೆ ತಮ್ಮ ನೇತೃತ್ವದಲ್ಲೇ ಕುಮಾರ್ ಒಂದೆರಡು ದಿನಗಳ ಪ್ರವಾಸ ಏರ್ಪಡಿಸಿದ್ದರು. ಅವರ ಜತೆ ಒಟ್ಟುಗೂಡಿ ಒಂದು ಸಂಜೆ ಕಳೆಯಲು ಸಂಸ್ಥೆಯ ಮೈಸೂರಿನ ಪ್ರತಿನಿಧಿಗಳಿಗೆ ಆಮಂತ್ರಣವಿತ್ತಿದ್ದರು. ಸದರ್ನ್ ಸ್ಟಾರ್ ಹೊಟೆಲಲ್ಲಿ ನಡೆದ ಆ ಕೂಟಕ್ಕೆ ನಾನು ಹೋಗಿರಲಿಲ್ಲ. ನನ್ನ ಅನುಪಸ್ಥಿತಿಯ ಲಾಭ ಪಡೆದ ನನ್ನ ಘನತೆವೆತ್ತ ಪ್ರಜಾವಾಣಿ ಸಹೋದ್ಯೋಗಿಗಳು ನನ್ನ ಬಗ್ಗೆ ಚಾಡಿ ಹೇಳಿದ್ದರು. ನಾನು ಆಫೀಸಿಗೇ ಬರುತ್ತಿಲ್ಲವೆಂದೂ ದೂರಿದ್ದರು. ಅಲ್ಲೇ ಉಪಸ್ಥಿತರಿದ್ದ ಬೆಂಗಳೂರು ಡೆಕ್ಕನ್ ಹೆರಾಲ್ಡ್‌ನ ನನ್ನ ಒಂದಿಬ್ಬರು ವಿಭಾಗ ಮುಖ್ಯಸ್ಥರು ನನ್ನ ಪರವಾಗಿ ಮಾತನಾಡಿದ್ದಾರೆಂದು ನಂತರ ತಿಳಿದುಬಂತು.

ಮಾರನೆಯ ದಿನ ಸಂಜೆ, ಕುಮಾರ್ ಕಚೇರಿಗೆ ದಿಢೀರ್ ಭೇಟಿ ನೀಡಿ ನಮ್ಮ ಪ್ರಜಾವಾಣಿ ವರದಿಗಾರರನ್ನು ಕಕ್ಕಾಬಿಕ್ಕಿಯಾಗಿಸಿದ್ದರು. ನನ್ನ ಸಹೋದ್ಯೋಗಿಗಳು ನೀಡುತ್ತಿದ್ದ ಕಿರುಕುಳವನ್ನು ಅವರಲ್ಲಿ ಪ್ರಸ್ತಾಪಿಸಿದೆ. ನೆನ್ನೆ ನಿಮ್ಮ ಬಗ್ಗೆ ಅವರು ದೂರಿದರು, ಅದಕ್ಕಾಗಿ ಇಂದು ಅವರ ಬಗ್ಗೆ ನೀವು ದೂರುತ್ತಿದ್ದೀರಿ ಅಂದರು. ಒಂದು ಮುಖ್ಯ ವ್ಯತ್ಯಾಸವಿದೆ, ಮಿಸ್ಟರ್ ತಿಲಕ್ ಕುಮಾರ್. ಅವರು ನನ್ನ ಬೆನ್ನ ಹಿಂದೆ ದೂರಿದರು. ಗಂಡಸಾದ್ದರಿಂದ ನಾನು ಅವರೆದುರಿಗೇ ದೂರುತ್ತಿದ್ದೇನೆ. ಅಂದು ನಾನು ಹೌಹಾರಿದ್ದಕ್ಕೆ ನನಗೆ ಸಿಕ್ಕಿದ್ದು ವರ್ಗಾವಣೆಯ ಬೆದರಿಕೆ. ಆ ಬೆದರಿಕೆಗೆ ನಾನು ಸೊಪ್ಪು ಹಾಕದಿದ್ದುದರಿಂದ ಅದು ಕಾರ್ಯಗತವೂ ಆಯಿತು.

ಅಂದು ನಾನು ಮಾತನಾಡಿದಾಗ, ನಾನು ಹೇಳಿದ್ದನ್ನು ವಿರೋಧಿಸಿ ಒಬ್ಬ ಸಹೋದ್ಯೋಗಿಯೂ ದನಿ ಎತ್ತಲಿಲ್ಲ. ಎದುರಿಗೆ ಸೆಣಸಾಡುವ ಸ್ವಭಾವವಿಲ್ಲದವರು. ಒಂದು ವ್ಯಕ್ತಿಯ ವಿರುದ್ಧವೇ ಮುಖಾಮುಖಿ ಸೆಣಸಲಾರದವರು ವ್ಯವಸ್ಥೆಯನ್ನು ಹೇಗೆ ಎದುರು ಹಾಕಿಕೊಳ್ಳಬಲ್ಲರು?

ನಾನಾ ಪಟೇಕರ್ ನಾಯಕ ನಟನಾಗಿ ಅಭಿನಯಿಸಿರುವ ಕ್ರಾಂತಿ ವೀರ ಚಿತ್ರದ ಕೊನೆಯಲ್ಲಿ ಭ್ರಷ್ಟಾಚಾರಿಗಳನ್ನು ಕೊಂದಕ್ಕಾಗಿ ಅವನನ್ನು ಗಲ್ಲಿಗೇರಿಸುವ ದೃಶ್ಯ. ಅದಕ್ಕೆ ಮುಂಚೆ ಅವನಿಗೆ ಮಾತನಾಡುವ ಅವಕಾಶ ನೀಡಲಾಗುತ್ತದೆ. ಅವನ ಭಾಷಣದ ಮುಖ್ಯಾಂಶದ ಸಾರ: ನಿಮ್ಮನ್ನು ಸೃಷ್ಟಿಸಿದ ಭಗವಂತನೇನಾದರೂ ಒಮ್ಮೆಭೂಮಿಯತ್ತ ಇಣುಕಿ ನೋಡಿದರೆ, ನಿಮ್ಮನ್ನು ಕಂಡು ಅವನಿಗೇ ಆಶ್ಚರ್ಯವಾಗುತ್ತದೆ. ಅರೆ, ನಾನು ಮಾನವರನ್ನು ನಿರ್ಮಿಸಿದೆ, ಇಲ್ಲಿ ನೋಡಿದರೆ ಕೀಟಗಳಷ್ಟೇ ಕಂಡುಬರುತ್ತಿದೆ.

ನನ್ನನ್ನು ನಾನು ಸಂತ್ರಸ್ತನನ್ನಾಗಿ ಬಿಂಬಿಸಿಕೊಳ್ಳುವ ಪ್ರಯತ್ನ ಇದಲ್ಲ. ಸಹೋದ್ಯೋಗಿಗಳು ನೀಡುತ್ತಿದ್ದ ಕಿರುಕುಳದ ಕಿರು ಪರಿಚಯ ಇದಷ್ಟೆ. ಇದನ್ನು ಸವಿವರವಾಗಿ ಬೇರೆಡೆ ಬರೆದಿದ್ದೇನೆ. ಇದು ನಾನೊಬ್ಬನೇ ಅನುಭವಿಸಿದ/ಅನುಭವಿಸುವ ಯಾತನೆಯಲ್ಲ. ಅನುಭವಿಸುತ್ತಿರುವುದನ್ನು ಹೇಳಿಕೊಳ್ಳಲಾಗದೆ ಮೂಕವೇದನೆ ಪಡುತ್ತಿರುವವರನ್ನು ಕಂಡಿದ್ದೇನೆ, ನೀವೆಲ್ಲರೂ ಕಂಡಿರುತ್ತೀರಿ. ಇದು ಜನಸಂಖ್ಯೆಯ ಮೂರು ಪರ್ಸೆಂಟ್ ಇರುವ ಬ್ರಾಹ್ಮಣರ ದೈನಂದಿನ ಸಮಸ್ಯೆ. ಅವರನ್ನು ತೆಗಳಲು ಅವರು ಬ್ರಾಹ್ಮಣರೆಂಬ ಒಂದೇ ಕಾರಣ ಸಾಕು. ವಿಶ್ವೇಶ್ವರಯ್ಯ, ವಿಶ್ವೇಶ ತೀರ್ಥ, ನಾರಾಯಣ ಮೂರ್ತಿ ಮುಂತಾದವರನ್ನೇ ಹಳಿಯುವುದನ್ನು ಬಿಟ್ಟಿಲ್ಲವೆಂದ ಮೇಲೆ ಸಾಮಾನ್ಯ ಬ್ರಾಹ್ಮಣರ ಪಾಡೇನು? ಇನ್ನು ಅವರ ಬೆಂಬಲಕ್ಕೆ ನಿಲ್ಲದಿರಲು ಅವರು ಅಲ್ಪಸಂಖ್ಯಾತರೆಂಬ ಕಾರಣವೇ ಸಾಕು. ನಾನು ಬ್ರಾಹ್ಮಣ ಸಮಾಜದ ವಕ್ತಾರನಲ್ಲ. ಬ್ರಾಹ್ಮಣರು ಮಾಡಿದ್ದೆಲ್ಲವನ್ನೂ ಸಮರ್ಥಿಸಲೂ ಇದನ್ನು ಬರೆದಿಲ್ಲ. ಬ್ರಾಹ್ಮಣೇತರರೆಲ್ಲರೂ ಪುರುಷೋತ್ತಮರೆಂದೂ ಹೇಳುವುದಿಲ್ಲ.

ಪಂಚರ್ ಅಂಗಡಿಯಲ್ಲಿ 'ದಸ್ ಕಾ ಸ್ಪಾನರ್ ಲಾರೇ' ಎನ್ನುತ್ತಾ ಬಾಲಕಾರ್ಮಿಕನ ತಲೆ ಮೇಲೆ ಮೊಟಕುವುದು ಆ ಬಾಲಕ ಮಾಡಿದ ತಪ್ಪಿಗಲ್ಲ; ಅದು ಮಾಲೀಕನ ಅಭ್ಯಾಸ. ಬ್ರಾಹ್ಮಣರದ್ದು ಆ ಬಾಲಕನ ಪರಿಸ್ಥಿತಿಯಷ್ಟೇ ದಾರುಣ. ಮಾಡದ ತಪ್ಪುಗಳಿಗೂ ಬೆಲೆ ತೆರಬೇಕಾಗಿರುವುದು ಅವರ ನಿತ್ಯ ಕರ್ಮ. ಅದಾವುದೋ ಪೊಗರು ಎಂಬ ಚಿತ್ರ. ಜನಿವಾರಧಾರೀ ಪುರೋಹಿತನ ಭುಜದ ಮೇಲೆ ಬೂಟುಗಾಲಿಟ್ಟ ದೃಶ್ಯ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ನಿರ್ಮಾಪಕನದ್ದೂ, ನಿರ್ದೇಶನದ್ದೂ ಪೊಗರೇ! ಯಾವುದೇ ವ್ಯಕ್ತಿಯ ಘನತೆಗೆ ಚ್ಯುತಿ ತರುವ ದೃಶ್ಯ (ಅಥವಾ ನಿತ್ಯದ ಬದುಕಿನ ಘಟನೆ) ಖಂಡನೀಯ. ಸೆನ್ಸಾರ್ ಇದಕ್ಕೆ ಕತ್ತರಿ ಪ್ರಯೋಗಿಸದಿದ್ದದ್ದೂ ಅಕ್ಷಮ್ಯ.

ಚೀನಾದಲ್ಲಿ ನಡೆಯುತ್ತಿರುವ ಮುಖ್ಯ ಬೆಳವಣಿಗೆಯ ಕುರಿತು ಬರೆಯಲು ಸಜ್ಜಾಗಿದ್ದೆ. ಫೇಸ್‌ಬುಕ್‌ನಲ್ಲಿ ಪೊಗರಿನ ಬಗ್ಗೆ ಯಾರೋ ಹಾಕಿದ್ದ ಪೋಸ್ಟ್ ಓದಿ ವಿಚಲಿತನಾದೆ, ಅದೇ ವಿಷಯದ ಬಗ್ಗೆ ಬರೆಯುವಂತಾಯಿತು.

ದೇಶದ ಅಸ್ಮಿತೆಗೆ ಮುಳುವಾದ ಟೂಲ್‌ಕಿಟ್ ಕಿತಾಪತಿ

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ranjith.hosakere@gmail.com

ದೇಶದಲ್ಲಿ ಕರೋನಾ ಬಳಿಕ ಕಳೆದ ಮೂರು ತಿಂಗಳಿನಿಂದ ಭಾರಿ ಸದ್ದು ಮಾಡುತ್ತಿದ್ದ ಏಕೈಕ ವಿಷಯವೆಂದರೆ, ರೈತರ ಪ್ರತಿಭಟನೆ. ಕೇಂದ್ರ ಸರಕಾರ ರೂಪಿಸಿರುವ ಮೂರು ಕೃಷಿ ಕಾಯಿದೆಗಳನ್ನು ವಿರೋಧಿಸಿ ಪಂಜಾಬ್ ಹಾಗೂ ಬಿಹಾರದ ಭಾಗದ ಕೆಲ ರೈತರು ಪ್ರತಿಭಟನೆ ನಡೆಸುತ್ತಿದ್ದರು. ಇದನ್ನು ತಾರ್ತಿಕ ಅಂತ್ಯಕ್ಕೆ ತಗೆದುಕೊಂಡು ಹೋಗುವ ಲೆಕ್ಕಾಚಾರದಲ್ಲಿ ಸಂಘಟನೆಗಳಿದ್ದವು. ಆದರೆ ಇಡೀ ಪ್ರಕರಣವನ್ನು ಪಕ್ಕಕ್ಕೆ ಸರಿಸಿ, ಕೆಲದಿನಗಳಿಂದ ಹೆಚ್ಚು ಚರ್ಚೆಯಾಗುತ್ತಿರುವ ವಿಷಯವೆಂದರೆ 'ಟೂಲ್‌ಕಿಟ್' ಪ್ರಕರಣ.

ಹೌದು, ರೈತರು ಪ್ರತಿಭಟನೆಯ ಭಾಗವಾಗಿ ಜನವರಿ 26ರಂದು ಮಾಡಿದ ಟ್ರ್ಯಾಕ್ಟರ್ ರ‍್ಯಾಲಿ ಹಿಂಸಾಚಾರ ಸ್ವರೂಪ ಪಡೆದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾದ ಕೆಲವೇ ದಿನದಲ್ಲಿ ಈ 'ಟೂಲ್‌ಕಿಟ್' ಗದ್ದಲ ಶುರುವಾಯಿತು. ಆರಂಭದಲ್ಲಿ ಕೆಲ ಟೆಕ್ ಸ್ಯಾವಿಗಳನ್ನು ಹೊರತುಪಡಿಸಿದರೆ, ಅನೇಕರಿಗೆ ಟೂಲ್‌ಕಿಟ್‌ನ ತಲೆಬುಡ ಅರ್ಥವಾಗಿರಲಿಲ್ಲ. ಈಗಲೂ ಅನೇಕರಿಗೆ ಅದರ ಪೂರ್ಣ ಮಾಹಿತಿಯಿಲ್ಲ ಎನ್ನುವುದು ಬೇರೆ ಮಾತು.

ಆರಂಭದಲ್ಲಿ ಈ ಟೂಲ್‌ಕಿಟ್ ಗಲಾಟೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿತ್ತು. ಮೊದಲಿಗೆ ಗ್ರೇಟಾ ಥನ್ ಬರ್ಗ್ ಭಾರತದ ರೈತರ ಪ್ರತಿಭಟನೆಗೆ ಸಂಬಂಧಿಸಿದಂತೆ ಮೊದಲು ಟ್ವೀಟ್ ಮಾಡಿ, 'ಭಾರತದ ರೈತರೊಂದಿಗೆ ನಾವಿದ್ದೇವೆ' ಎಂದು ಟ್ವೀಟ್ ಮಾಡಿದಳು. ಸ್ವೀಡನ್ ಮೂಲದ ಈಕೆ 2019ರಲ್ಲಿ ವಿಶ್ವಸಂಸ್ಥೆಯಲ್ಲಿ, ಪರಿಸರವನ್ನು ಕಾಪಿಟ್ಟುಕೊಳ್ಳುವ ನಿಟ್ಟಿನಲ್ಲಿ ನಾವೇನು ಮಾಡಬೇಕು? ಅಭಿವೃದ್ಧಿಯ ಹೆಸರಲ್ಲಿ ಪರಿಸರ ನಾಶ ಮಾಡಿದರೆ, ಮುಂದಿನ ಪೀಳಿಗೆ ಏನು ಮಾಡಬೇಕು ಎಂದು ವಿಶ್ವನಾಯಕರನ್ನು ಪ್ರಶ್ನಿಸಿ, how dare you ಎಂದಿದ್ದಳು. ಆಕೆ ಮಾಡಿದ ನಾಲ್ಕೈದು ನಿಮಿಷದ ಭಾಷಣ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿತ್ತು. ಅದಾದ ಬಳಿಕ ಪರಿಸರ ಸಂರಕ್ಷಣೆ, ಹೋರಾಟಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಳ್ಳುತ್ತಿದ್ದಳು. ಆದರೆ ಇದಕ್ಕಿಂತ ಭಾರತದ ರೈತ ಹೋರಾಟಕ್ಕೆ ಸಂಬಂಧಿಸಿದಂತೆ ಮಾತನಾಡುತ್ತಿದ್ದಂತೆ ಪುನಃ ಚರ್ಚೆಯ ಕೇಂದ್ರವಾದಳು.

ಈಕೆ ಟ್ವೀಟ್ ಮಾಡುತ್ತಿದ್ದಂತೆ ಪರ-ವಿರೋಧ ಚರ್ಚೆಗಳು ಆರಂಭಗೊಂಡವು. ವಿವಿಧ ದೇಶಗಳ ಪ್ರಮುಖರು, ದೇಶದ ಪ್ರತಿಭಟನೆಯಲ್ಲಿ ಮೂಗುತೂರಿಸುವ ಪ್ರಯತ್ನವನ್ನು ಮಾಡಿದರು. ಭಾರತದಲ್ಲಿ ರೈತರ ಪ್ರತಿಭಟನೆ ಬಿಟ್ಟು, ಗ್ರೇಟಾ ಮಾಡಿದ್ದು, ಸರಿಯೋ ತಪ್ಪೋ ಎಂದು ವಿಮರ್ಶೆ ಮಾಡಲು ಶುರು ಮಾಡಿದರು. ಖ್ಯಾತ ನಾಮರೆಲ್ಲ, ಭಾರತದ ವಿಷಯಕ್ಕೆ ಬೇರೆಯವರು ಬರುವ ಅಗತ್ಯವಿಲ್ಲ. ನಮ್ಮ ದೇಶದ ಸಮಸ್ಯೆಯನ್ನು ನಾವು ಬಗೆಹರಿಸಿಕೊಳ್ಳುತ್ತೇವೆ. ನಿಮ್ಮ ಸಲಹೆ, ಸೂಚನೆ, ಮಧ್ಯಸ್ಥಿಕೆಯ ಅಗತ್ಯವಿಲ್ಲ ಎನ್ನುವ ಸ್ಪಷ್ಟ ಮಾತುಗಳನ್ನು ಆಡಿದರು. ಆದರೆ ಈ ಗಲಾಟೆ ಮಾತ್ರ ಇತ್ಯರ್ಥವಾಗಲಿಲ್ಲ.

ಅತ್ತ ರೈತರು ತಮ್ಮ ಪ್ರತಿಭಟನೆಯನ್ನು ಮುಂದುವರಿಸಿದ್ದರೆ, ಇತ್ತ ಇನ್ನೊಂದು ಈ ಗ್ರೇಟಾಳ ಟ್ವೀಟ್ ಅನ್ನು ಊರುಗೋಲಾಗಿಟ್ಟುಕೊಂಡು, ಸರಕಾರದ ವಿರುದ್ಧ ತಮ್ಮ ಟ್ವೀಟ್ ಸಮರವನ್ನು ಶುರು ಮಾಡಿದ್ದರು. ಆದರೆ ಇಲ್ಲಿ ಗಮನಿಸಬೇಕಾಗಿರುವುದು, ಗ್ರೇಟಾ ಎನ್ನುವ ಯುವತಿ ಯಾರು? ಆಕೆಗೂ, ಭಾರತದಲ್ಲಿ ನಡೆಯುತ್ತಿರುವ ರೈತರ ಹೋರಾಟಕ್ಕೂ ಏನು ಸಂಬಂಧ? ಅದೆಲ್ಲ ಹೋಗಲಿ, ಇಲ್ಲಿನ ರೈತರ ಸಮಸ್ಯೆ ಬಗ್ಗೆ ಆಕೆಗೆ ತಿಳಿದಿದೆಯೇ? ಅಥವಾ ಈ ತಿದ್ದುಪಡಿಗಳನ್ನು ಸರಕಾರ ತರಲು ಮುಂದಾಗಿರುವದಾದರೂ ಏಕೆ ಎನ್ನುವ ಬಗ್ಗೆ ಮಾಹಿತಿ ಇದೆಯೇ ಎನ್ನುವುದನ್ನು ನೋಡಿದರೆ, ಬಹುಪಾಲು ಆಕೆಗೆ ಇದ್ಯಾವುದು ತಿಳಿದಿರಲಿಕ್ಕಿಲ್ಲ. ಇನ್ನು ಗ್ರೇಟಾ ರೀತಿಯೇ ಕೆನಡಾ ಮೂಲಕ ಗಾಯಕಿ ರಿಹಾನಾ, ಮೀಯಾ ಕಲೀಫಾ ಸೇರಿದಂತೆ ಅನೇಕರು ಭಾರತದ ಪ್ರತಿಭಟನೆಯನ್ನು ತುಂಬಾ ಗಂಭೀರವಾಗಿ ಪರಿಗಣಿಸಿದವರಂತೆ ಟ್ವೀಟ್ ಮಾಡಿದ್ದೇಕೆ ಎನ್ನುವುದನ್ನು ಪತ್ತೆ ಹಚ್ಚುವುದಕ್ಕೂ ಹಲವು ದಿನಗಳೇ ಬೇಕಾಯಿತು.

ಭಾರತದಲ್ಲಿ ನಡೆಯುತ್ತಿರುವ ಈ ರೈತರಿಗೂ, ಅದೆಲ್ಲೋ ದೂರದ ಸ್ವೀಡನ್‌ನಲ್ಲಿರುವ ಗ್ರೇಟಾಗೂ ಏನು ಸಂಬಂಧ. ಈ ರೀತಿ ಧಿಗ್ಗನೆ ಎದ್ದು ಟ್ವೀಟ್ ಮಾಡಿದ್ದಾದರೂ ಏಕೆ ಎನ್ನುವುದನ್ನು ಅನೇಕರು ತಲೆಕೆಡಿಸಿಕೊಂಡರು. ಆದರೆ ಈ ಹಂತದಲ್ಲಿ ತಿಳಿದದ್ದು, ಈ ರೀತಿ ಟ್ವೀಟ್ ಮಾಡುವುದಕ್ಕೆ ಖಲಿಸ್ತಾನದ ಸಂಘಟನೆ ಆ ಒಂದು ಟ್ವೀಟ್‌ಗೆ ಬರೋಬ್ಬರಿ 2.5 ಮಿಲಿಯನ್ ಡಾಲರ್ (ಭಾರತದ ರುಪಾಯಿ ಮೌಲ್ಯದಲ್ಲಿ ಹೇಳುವುದಾದರೆ 18,11,26,250 ರು.) ಕೊಟ್ಟಿತ್ತಂತೆ. ನಾವಿಲ್ಲಿ ಗಮನಿಸಬೇಕಿರುವುದು, ರೈತರ ಪ್ರತಿಭಟನೆಯನ್ನು ಇನ್ನಷ್ಟು ತೀವ್ರಗೊಳಿಸಬೇಕು ಎನ್ನುವ ಏಕೈಕ ಕಾರಣಕ್ಕೆ, ಈ ರೀತಿ ದುಡ್ಡು ಕೊಟ್ಟು ದೇಶದ ಮರ್ಯಾದೆಯನ್ನು ಹಾಳು ಮಾಡುವ ಅಗತ್ಯವಿತ್ತೇ? ದೇಶ ಎಂದರೆ ಒಂದಿಲ್ಲೊಂದು ಸಮಸ್ಯೆಯಿದ್ದೇ ಇರುತ್ತದೆ. ಅದು ದೇಶದ ಆಂತರಿಕ ವಿಷಯ. ಅದನ್ನು ದೇಶದೊಳಗೆ ಬಗೆಹರಿಸಿಕೊಳ್ಳಬೇಕು ಎನ್ನುವುದನ್ನು ಬಿಟ್ಟು ವಿಶ್ವ ಮಟ್ಟದಲ್ಲಿ ಈ ವಿಷಯವನ್ನು ಇಷ್ಟು ದೊಡ್ಡದಾಗಿ ಮಾಡುವ ಅಗತ್ಯವಾದರೂ ಏನಿತ್ತು?

ಇನ್ನು ಈ ಪೇಯ್ಡ್ ಟ್ವೀಟ್ ಬೆಳಕಿಗೆ ಬಂದದ್ದು, ಗ್ರೇಟಾಳ ಎಡವಟ್ಟಿನಿಂದ. ಈ ಹೋರಾಟವನ್ನು ಯಾವ ರೀತಿ ದೊಡ್ಡ ಮಟ್ಟಕ್ಕೆ ತಗೆದುಕೊಂಡು ಹೋಗಬೇಕು? ಯಾವ ಹ್ಯಾಷ್ ಟ್ಯಾಗ್ ಬಳಸಿ ಯಾವ ಟ್ವೀಟ್ ಮಾಡಬೇಕು ಎನ್ನುವ ವಿಷಯ ಹಾಗೂ ಗಣರಾಜ್ಯೋತ್ಸವದಂದು ದೇಶದಲ್ಲಿ ನಡೆದ ಗಲಾಟೆಯನ್ನು ಯಾವ ರೀತಿ ಅಂತಾರಾಷ್ಟ್ರೀಯ ಸುದ್ದಿ ಮಾಡಬೇಕು ಎನ್ನುವ ಸವಿಸ್ತಾರವಾದ ಡಾಕ್ಯೂಮೆಂಟ್ ಒಂದನ್ನು ಅಚಾನಕ್ ಆಗಿ ಟ್ವಿಟ್ ಮಾಡಿದ್ದಳು. ಈ ಡ್ಯಾಕೂಮೆಂಟ್ ಇದೀಗ ಸದ್ದು ಮಾಡುತ್ತಿರುವ 'ಟೂಲ್ ಕಿಟ್'.

ಟೂಲ್‌ಕಿಟ್ ಎಂದ ಕೂಡಲೇ ಅದೇನೋ ದೊಡ್ಡ ರಾಕೆಟ್ ಸೈನ್ಸ್ ಎಂದು ಅನೇಕರು ಅಂದುಕೊಂಡಿದ್ದಾರೆ. ಯಾವುದೇ ವಿಷಯವನ್ನು ಪ್ರಚಾರ ಮಾಡುವುದಕ್ಕೆ ಯಾವ ರೀತಿ ನಡೆದುಕೊಳ್ಳಬೇಕು. ಯಾವ ರೀತಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಬೇಕು ಎನ್ನುವುದನ್ನು ಹೇಳುವುದಕ್ಕೆ ಟೂಲ್‌ಕಿಟ್ ಎನ್ನುತ್ತಾರೆ. ಪ್ರತಿಭಟನೆ ವೇಳೆ ನಾವೆಲ್ಲ ಹೇಗೆ ಪಾಂಫ್ಲೆಟ್ ಹಂಚಿ ಪ್ರಚಾರ ಮಾಡುತ್ತೇವೋ ಅದೇ ರೀತಿ ಆನ್‌ಲೈನ್ ಅಥವಾ ಸಾಮಾಜಿಕ ಜಾಲತಾಣದಲ್ಲಿ ಈ ಟೂಲ್‌ಕಿಟ್ ಎಲ್ಲರಿಗೂ ಕಳುಹಿಸಿ, ಅದರಲ್ಲಿ ಇರುವಂತೆ ಟ್ವೀಟ್ ಮಾಡುವುದು ಅಥವಾ ಅದರಲ್ಲಿರುವ ಹ್ಯಾಷ್ ಟ್ಯಾಗ್ ಬಳಸಿಕೊಂಡು ಪೋಸ್ಟ್ ಮಾಡುವುದು ಹೇಗೆ ಎನ್ನುವುದನ್ನು ತಿಳಿಸುವ ಒಂದು ಸಾಧನವಷ್ಟೇ.

ಗ್ರೇಟಾ ಹಾಕಿದ ಈ ಟೂಲ್‌ಕಿಟ್ ಪೋಸ್ಟ್ ಅನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಸರಕಾರ, ಇದರ ಮೂಲ ಪತ್ತೆಗೆ ಮುಂದಾದಾಗ ಸಿಕ್ಕಿದ್ದು, ಬೆಂಗಳೂರು, ಮುಂಬೈ ನಂಟು. ಹೌದು, ಈ ಟೂಲ್‌ಕಿಟ್ ಅನ್ನು ಸಿದ್ಧಪಡಿಸಿದ್ದು ಬೆಂಗಳೂರು ಮೂಲದ ಸೋಕಾಲ್ಡ್ ಪರಿಸರ ಹೋರಾಟಗಾರ್ತಿ ದಿಶಾ ರವಿ, ಮುಂಬೈ ಮೂಲದ ವಕೀಲೆ ನಿಕಿತಾ ಹಾಗೂ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶಾಂತನು ಎನ್ನುವುದು. ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಹೆಸರನ್ನು ಹಾಳು ಮಾಡುವುದಕ್ಕಾಗಿಯೇ ವ್ಯವಸ್ಥಿತ ಸಂಚನ್ನು ರೂಪಿಸಿದ ಆರೋಪದಲ್ಲಿ ದೇಶದ್ರೋಹದ ಪ್ರಕರಣವನ್ನು ಈ ಎಲ್ಲರ ವಿರುದ್ಧ ದಾಖಲಿಸಿದ್ದಾರೆ.

ದೇಶದ್ರೋಹದ ಪ್ರಕರಣ ದಾಖಲಿಸಿದ್ದಕ್ಕೂ ಅನೇಕರು ವಿರೋಧಿಸಿದ್ದಾರೆ. ದಿಶಾ ಎನ್ನುವ 'ಅಮಾಯಕ'ರ ವಿರುದ್ಧ ಕೇಂದ್ರ ಸರಕಾರ ಸೇಡು ತೀರಿಸಿಕೊಳ್ಳುತ್ತಿದೆ ಎನ್ನುವ ವ್ಯಾಖ್ಯಾನಗಳು ಬರುತ್ತಿವೆ. ಇನ್ನು ಕೆಲವರು ಈ ರೀತಿ ಸಾಮಾಜಿಕ ಜಾಲತಾಣದಲ್ಲಿ ಸರಕಾರದ ವಿರುದ್ಧ ಮಾತನಾಡಿದ ಮಾತ್ರಕ್ಕೆ, ದೇಶದ್ರೋಹವಾಗುವುದಿಲ್ಲ ಎನ್ನುವ ಕಾನೂನು ಸಲಹೆಯನ್ನು ನೀಡುತ್ತಿದ್ದಾರೆ. ಆದರೆ ದೇಶದ ವಿರುದ್ಧ ಸಂಚು ಅಥವಾ ದೇಶದ್ರೋಹಿ ಎನಿಸಿಕೊಳ್ಳಲು ಕೇವಲ ಅಶಾಂತಿ ಸೃಷ್ಟಿಸುವುದು ಅಥವಾ ಅದಕ್ಕೆ ಪ್ರೇರಣೆ ನೀಡುವುದು ಮಾತ್ರವಲ್ಲ, ದೇಶದ ವಿರುದ್ಧ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಪನಂಬಿಕೆ ಸೃಷ್ಟಿಸಿ, ಅಲ್ಲಿಂದ ತಮ್ಮ ವ್ಯವಸ್ಥಿತ ಸಂಚಿನ ಮೂಲಕ ಸರಕಾರ ಅಥವಾ ದೇಶದ ವಿರುದ್ಧ ಜನರನ್ನು ಎತ್ತಿಕಟ್ಟುವುದು ಸಹ ದೇಶದ್ರೋಹವೇ ಆಗುತ್ತದೆ.

ಇದೀಗ ದಿಶಾ ರವಿಯನ್ನು ದೆಹಲಿ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದು, ಮುಂದೇನಾಗುತ್ತದೆ ಎನ್ನುವುದು ಕಾನೂನು ವ್ಯಾಪ್ತಿಯಲ್ಲಿ ಏನಾಗಬೇಕೋ ಅದು ಆಗುತ್ತದೆ. ಅದರ ಬಗ್ಗೆ ಹೆಚ್ಚು ವಿಶ್ಲೇಷಣೆ ಮಾಡುವುದಕ್ಕಿಂತ, ಆ ರೀತಿಯ ಮನಸ್ಥಿತಿ ಹೊಂದಿರುವವರ ಬಗ್ಗೆ ಯೋಚಿಸಬೇಕಿದೆ. ದೇಶದಲ್ಲಿ ನಡೆಯುತ್ತಿರುವ ಹೋರಾಟ, ಪ್ರತಿಭಟನೆಗಳಿಗೆ ಕರೆ ನೀಡುವ ಪ್ರತಿಯೊಂದು ಸಂಘಟನೆ ಅಥವಾ ಗುಂಪುಗಳಿಗೆ, ತಮ್ಮ ನಿಲುವು ಸರಿಯಾಗಿಯೇ ಇರುತ್ತದೆ. ಇನ್ನೊಂದೆಡೆ ಆಡಳಿತದಲ್ಲಿರುವವರಿಗೂ ತಾವು ತೆಗೆದುಕೊಂಡ ನಿರ್ಧಾರಗಳು ಸರಿಯಾಗಿಯೇ ಕಾಣಿಸುತ್ತದೆ. 'ಜನರನ್ನು ಮೆಚ್ಚಿಸೋಕೆ ಜನಾರ್ದನ'ನಿಂದಲೂ ಸಾಧ್ಯವಿಲ್ಲ ಎನ್ನುವುದು ಅದಕ್ಕೆ ಅಲ್ಲವೇ. ಆದರೆ ಮನೆಯಲ್ಲಿನ ಜಗಳವನ್ನು ಮನೆಯಲ್ಲಿಯೇ ಬಗೆಹರಿಸಿಕೊಳ್ಳದೇ, ದೊಡ್ಡ ವಿಚಾರ ಮಾಡಿ ಮನೆಯಾಚೆ ತಗೆದುಕೊಂಡು ಹೋದರೆ, ಹೊರಗಿನವರಿಗೆ ಆ ಜಗಳವನ್ನು ಇತ್ಯರ್ಥ ಪಡಿಸುವುದಕ್ಕಿಂತ ಹೆಚ್ಚಾಗಿ, ಅದನ್ನು ಮನೋರಂಜನೆಗೆ ಬಳಸಿಕೊಳ್ಳುತ್ತಾರೆ ಎನ್ನುವ ಅರಿವು ನಮಗಿರಬೇಕು. ಅದೇ ಮಾತು, ದೇಶದ ವಿಷಯದಲ್ಲಿಯೂ ಅನ್ವಯಿಸುತ್ತದೆ. ರೈತರ ಹೋರಾಟ ಆರಂಭಗೊಂಡ ದಿನದಿಂದ, ಅದನ್ನು ಶಾಂತಿಯುತವಾಗಿ ಬಗೆಹರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಪ್ರಯತ್ನ ನಡೆದರೂ ಫಲ ನೀಡಲಿಲ್ಲ. ಆದರೀಗ ಆ ಗ್ರೇಟಾ ಮಾಡಿದ ಟ್ವೀಟ್, ಅದಕ್ಕೆ ರೂಪುಗೊಂಡ ಪ್ಲಾನ್‌ನಿಂದ ರೈತರಿಗೆ ಫಲ ಸಿಕ್ಕಿದ್ದಕ್ಕಿಂತ ಹೆಚ್ಚಾಗಿ, ದೇಶದ ಮರ್ಯಾದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕುಗ್ಗಿದ್ದಷ್ಟೇ ಪ್ರಯೋಜನ.

ಕೇವಲ ರೈತರ ಹೋರಾಟ ಮಾತ್ರವಲ್ಲ ಇತ್ತೀಚಿನ ದಿನದಲ್ಲಿ ಈ ಸೋಷಿಯಲ್ ಮೀಡಿಯಾ ವಾರಿಯರ್ಸ್ ಅನೇಕ ವಿಷಯಗಳನ್ನು ತಮ್ಮ ಪ್ರತಿಷ್ಠೆಯ ರೀತಿ ಹಾಕುತ್ತಿದ್ದಾರೆ. ಅದರಲ್ಲಿಯೂ ಅತ್ಯಂತ ಸೂಕ್ಷ್ಮ ವಿಚಾರಗಳನ್ನು ಹೇಳುವ ಮೂಲಕ ದೇಶದ ವಿರೋಧಿ ಅಥವಾ ದೇಶದ ಅತಿ ಸೂಕ್ಷ್ಮ ವಿಷಯಗಳನ್ನು ತಿಳಿಯಬೇಕು ಎನ್ನುವ ಉತ್ಸಾಹದಲ್ಲಿರುವವರಿಗೆ ರಹದಾರಿಯಾಗಿ ಈ ಸೋಷಿಯಲ್ ಮೀಡಿಯಾಗಳಾಗುತ್ತಿವೆ. ಅಂದಮಾತ್ರಕ್ಕೆ ವಿರೋಧಿಸುವವರ ಟ್ವೀಟ್ ಮಾತ್ರ ದೇಶಕ್ಕೆ ಅಪಾಯವೆಂದಲ್ಲ. ಕೆಲ ಅಂಧ ಅಭಿಮಾನಿಗಳು, ತಮ್ಮ ಪಕ್ಷ ಅಥವಾ ನಾಯಕರನ್ನು ಆಡಿ ಹೊಗಳಿ ಅಟ್ಟಕ್ಕೆ ಏರಿಸುವ ಭರದಲ್ಲಿಯೂ ರಹಸ್ಯವಾಗಿರಬೇಕಾದ ವಿಷಯ, ಬಟಾಬಯಲಾಗುತ್ತಿವೆ.

ಹಾಗೆ ನೋಡಿದರೆ, ಈ ರೀತಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಲೆತಗ್ಗಿಸುವಂತಹ ಘಟನೆಗಳು ನಡೆಯುತ್ತಿರುವುದು ಅನಕ್ಷರಸ್ಥರಿಂದಲ್ಲ. ಬದಲಿಗೆ ಶಿಕ್ಷಿತ ವರ್ಗದವರೇ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡುವ ಉತ್ಸಾಹದಲ್ಲಿ ಅಥವಾ ತಮ್ಮ 'ಇಸಂ'ಗಳ ಸಂಕೋಲೆಗೆ ಸಿಲುಕಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಈಗ ಪುನಃ ಗ್ರೇಟಾಳ ಟ್ವೀಟ್ ಬಗ್ಗೆ ನೋಡುವುದಾದರೆ, ಆ ಒಂದು ಟ್ವೀಟ್ ದೇಶದ ಆಂತರಿಕ ವಿಷಯ ವಿಶ್ವಕ್ಕೆ ಪ್ರಚಾರವಾಯಿತು. ಹಲವು ರಾಷ್ಟ್ರಗಳು ಭಾರತಕ್ಕೆ 'ಬುದ್ಧಿ' ಹೇಳುವ ರೀತಿಯಲ್ಲಿ ನೇರ ಅಥವಾ ಪರೋಕ್ಷವಾಗಿ ಟ್ವೀಟ್ ಶುರು ಮಾಡಿದವು. ಹಲವು ಸೆಲೆಬ್ರೆಟಿಗಳು ಗ್ರೇಟಾ ಮೂಗು ತೂರಿಸುವುದು ಬೇಡ ಎಂದರೆ, ಇನ್ನು ಕೆಲವರು ಗ್ರೇಟಾ ಸಲಹೆ ಪಡೆದುಕೊಂಡೇ ಮೋದಿ ರೈತರ ಸಮಸ್ಯೆ ಬಗೆಹರಿಸಬೇಕು ಎನ್ನುವ ರೀತಿ ಆಕೆಯನ್ನು ಬೆಂಬಲಿಸಿದರು.

ಈ ರೀತಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡಿ, ಅವರಿಂದ ಸಲಹೆ ಪಡೆದದ್ದು ಇದೇ ಮೊದಲಲ್ಲ. ಬೆಂಗಳೂರಿನ ಕಸದಿಂದ ಹಿಡಿದು, ಕಾಶ್ಮೀರ ಗಡಿ ಸಮಸ್ಯೆಯ ತನಕ ವಿದೇಶಿಗರು ಮೂಗು ತೂರಿಸಿ 'ಭಾರತೀಯರು ಹೀಗೆ ಮಾಡಿದರೆ ಸರಿ ಹೋಗುತ್ತದೆ' ಎನ್ನುವುದನ್ನು ಹೇಳಿದ್ದಾರೆ. ಕೆಲವರು ಹೇಳಿರುವ ಸಲಹೆಗಳು ಕೆಲವು ಉತ್ತಮವಾಗಿಯೂ ಇದೆ ಎನ್ನುವುದು ಬೇರೆ ಮಾತು. ಇನ್ನು ತೀರಾ ಇತ್ತೀಚಿಗೆ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಬಗ್ಗೆಯಾಗಲಿ, ಸಿಎಎ ಜಾರಿಗೊಳಿಸಿದಾಗ ನೆರೆ ಪಾಕಿಸ್ತಾನ, ಚೀನಾದಿಂದ ಭಾರತದ ತೀರ್ಮಾನದ ಬಗ್ಗೆ ಅಕ್ಷೇಪವ್ಯಕ್ತವಾಗಿತ್ತು. ಅದಕ್ಕೆ ಕಾರಣ, ಬಿಡಿಸಿ ಹೇಳಬೇಕಾಗಿಲ್ಲ. ನೆರೆ ರಾಷ್ಟ್ರ ಅಥವಾ ಶತ್ರುರಾಷ್ಟ್ರಗಳು ನಮ್ಮ ದೇಶದ ಪ್ರತಿಯೊಂದು ವಿಷಯದಲ್ಲಿ 'ಕಾಮೆಂಟ್' ಮಾಡುವುದು ಅಥವಾ ವಿರೋಧಿಸುವುದು ಸಹಜ. ಕೆಲವೊಮ್ಮೆ ಆ ದೇಶಗಳ ವಿಚಾರದಲ್ಲಿ ಭಾರತವೂ ತನ್ನ ನಿಲುವನ್ನು ವ್ಯಕ್ತಪಡಿಸಿರುತ್ತದೆ. ಸ್ನೇಹ ರಾಷ್ಟ್ರಗಳಾದರೆ ತನ್ನ ಕೈಲಾದ ಸಹಾಯವನ್ನು ಮಾಡುತ್ತವೆ. ವಿದೇಶಾಂಗ ನೀತಿಯಲ್ಲಿ ಇದೊಂದು ಸಹಜ ಪ್ರಕ್ರಿಯೆ. ಆದರೆ ಇದನ್ನೇ ನೆಪವಾಗಿಟ್ಟುಕೊಂಡು, ಈ ರೀತಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಟ್ರೆಂಡ್ ಸೃಷ್ಟಿಸುವುದಕ್ಕಾಗಿಯೇ ತಂಡವನ್ನು ರಚಿಸುವುದು, ಆಡಳಿತ ನಡೆಸುವವರನ್ನು ಟೀಕಿಸುವ ಭರದಲ್ಲಿ 'ದೇಶವೇ ಸರಿಯಲ್ಲ' ಎಂದು ತೋರಿಸುವ ರೀತಿ ಸರಿಯಲ್ಲ ಎನ್ನುವುದಷ್ಟೇ ವಾದ. ಆದ್ದರಿಂದ ದೇಶ ಪ್ರೇಮದ ಹೆಸರಲ್ಲಿ, ಆಡಳಿತವನ್ನು ವಿರೋಧಿಸುವ ಭರದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸ್ಥಾನವನ್ನು ಕೆಳಕ್ಕೆ ಇಳಿಸುವ ಪ್ರಯತ್ನ ಒಪ್ಪಿತವಲ್ಲ.

ಅಂತಿಮವಾಗಿ ಇಲ್ಲಿ ಹೇಳಲು ಹೊರಟಿರುವುದು, ದೇಶದ ರೈತರಿಗೆ ನ್ಯಾಯ ದೊರಕಿಸುವುದೇ ಈ ಇಡೀ ಹೋರಾಟದ ಉದ್ದೇಶವಾಗಿದ್ದರೆ, ಅದಕ್ಕೆ ಅಭ್ಯಂತರವಿಲ್ಲ. ಕೇಂದ್ರದ ಕಾಯಿದೆಗಳಿಂದ ರೈತನಿಗೆ ಒಂದು ವೇಳೆ ವಂಚನೆಯಾಗುತ್ತಿದೆ ಎನ್ನುವುದೇ ನಿಜವಾದರೆ, ದಿಶಾ ರವಿಯಂಥ ಕೋಟ್ಯಂತರ ಯುವಕ, ಯುವತಿಯರು ಹೋರಾಟಕ್ಕೆ ಅಣಿಯಾಗಬೇಕು. ಆದರೆ ಈ ಪ್ರಕರಣದಲ್ಲಿ ಆಗಿರುವುದು, ರೈತರ ಅನ್ಯಾಯ ಸರಿಪಡಿಸುವ ಕೆಲಸಕ್ಕಿಂತ ಹೆಚ್ಚಾಗಿ, ದೇಶದ ಆಂತರಿಕ ವಿಷಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭ್ಬಿಟಟಾಳಿ ಆಗಬೇಕು ಎನ್ನುವುದು. ಇದರಿಂದ ರೈತರಿಗಾಗುವ ಲಾಭಕ್ಕಿಂತ ಹೆಚ್ಚಾಗಿ, ದೇಶಕ್ಕಾಗುವ ನಷ್ಟ ಹೆಚ್ಚಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನ್ಯಾಯವನ್ನು ವಿರೋಧಿಸುವುದಕ್ಕೆ ಅವಕಾಶವಿದೆ ಎನ್ನುವ ಮಾತ್ರಕ್ಕೆ, ದೇಶದ ಮಾನವನ್ನು ವಿಶ್ವಮಟ್ಟದಲ್ಲಿ ಹರಾಜು ಹಾಕಬೇಕು ಎಂದಲ್ಲ.